<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ. 194/2022

<u>ಫಿರ್ಯಾದಿ</u> | <u>ಆರೋಪಿ</u>

ಶ್ರೀ ಗೋದಾವರಿ ಸೌಹಾರ್ದ ಕ್ರೆಡಿಟ್ ವಿರುದ್ಧ ಬೊಮ್ಮಯ್ಯ ಸುರೇಶ ರೇವಣಕರ್
ಕೋ-ಆಪರೇಟಿವ್ ಲಿ., ಗೋಕರ್ಣ ಶಾಖೆ.

<u>ಆರೋಪಿಃ</u>

ಬೊಮ್ಮಯ್ಯ ಸುರೇಶ ರೇವಣಕರ್,
ಪ್ರಾಯಸ್ಥ, ಸಾಃ ಹಿರೇಗುತ್ತಿ, ಕುಮಟಾ.

<u>- ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ -</u>

ನೀವು, ಫಿರ್ಯಾದುದಾರ ಸಹಕಾರಿಯಿಂದ ರೂ. 5,50,000/-ಗಳನ್ನು ಸಾಲವನ್ನು ಪಡೆದಿದ್ದು, ಸದರಿ ಸಾಲವು ಕಟಬಾಕಿಯಾಗಿದ್ದರಿಂದ ನೀವು ಅದರ ತೀರುವಳಿಯ ಸಲುವಾಗಿ ದಿಃ 09-03-2022 ನೇ ಯ ಕೆನರಾ ಬ್ಯಾಂಕ್, ಶಿರಸಿ ಶಾಖೆಯ ಚೆಕ್ ನಂ. 635854 ನೇದನ್ನು ರೂ. 6,57,000/- ಕ್ಕೆ ಚೆಕ್ ನ್ನು ಫಿರ್ಯಾದುದಾರ ಸಹಕಾರಿಗೆ ನೀಡಿದ್ದು , ಸದರಿ ಚೆಕ್ ನ್ನು ನಗದೀಕರಿಸಲು ಗೋಕರ್ಣ ಶಾಖೆಯ ಕೆನರಾ ಬ್ಯಾಂಕ್ ಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ನಗದೀಕರಣವಾಗದೆ ವಾಪಸ್ಸು ಬಂದಿದ್ದು , ಈ ಕುರಿತು ನಿಮಗೆ ದಿಃ 17-03-2022 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದ್ರಿ ನೋಟಿಸನ್ನು ನೀವು ಸ್ವೀಕರಿಸದೇ ವಾಪಸ್ಸು ಬಂದಿದ್ದು , 15 ದಿವಸ ಕಳೆದರೂ ಸದರಿ ಚೆಕ್ ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ, ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**<u>ಪ್ರಶ್ನೆ - 1</u>** <u>ನಿಮ್ಮ ಮೇಲೆ</u> ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

<u>ಉತ್ತರ -</u>

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 07–10–2022.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ